12

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 5/6/2020

# ಸರ್ಕಾರಿ ನೌಕರರ ಪ್ರತಿಭಟನೆ

ದಿನಾ 05.06.2020



ವಿಜಯವಾಣಿ ಚಿತ್ರ

ಸರ್ಕಾರಿ ನೌಕರರ ನಿಯೋಗ ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿತು.

**ಬೆಂಗಳೂರು:** ತುಟ್ಟಿಭತ್ಯೆ ಸ್ಥಗಿತ, ಗಳಿಕೆ ರಜೆ ರದ್ದು, ಸೇವಾ ನಿಯಮ ತಿದ್ದುಪಡಿ, ಹುದ್ದೆಗಳ ಕಡಿತ ಸೇರಿ ಸರ್ಕಾರದ ಹಲವು ನಿರ್ಧಾರ ವಿರೋಧಿಸಿ ಸಚಿವಾಲಯ ನೌಕರರ ಸಂಘ, ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಹಾಗೂ ಎನ್‌ಪಿಎಸ್ ನೌಕರರ ಸಂಘದ ಸದಸ್ಯರು ಗುರುವಾರ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

**» ಸರ್ಕಾರದ ಹಲವು ನಿರ್ಧಾರಗಳಿಗೆ ವಿರೋಧ**

ಮಧ್ಯಾಹ್ನ ಊಟದ ಸಮಯದಲ್ಲಿ ವಿಧಾನಸೌಧ ಆವರಣದ ಮಹಾತ್ಮಾ ಗಾಂಧಿ ಪ್ರತಿಮೆ ಬಳಿ ನೌಕರರ ಸಂಘದ ಅಧ್ಯಕ್ಷ ಪಿ. ಗುರುಸ್ವಾಮಿ ನೇತೃತ್ವದಲ್ಲಿ ಸಾಂಕೇತಿಕ ಧರಣಿ ನಡೆಸಲಾಯಿತು.

ಸೇವಾ ನಿಯಮಗಳಿಗೆ ತಿದ್ದುಪಡಿ ತರುವುದಕ್ಕೆ ಮುಂದಾಗಿರುವುದು ಸರಿಯಲ್ಲ, ಕೇಂದ್ರ ಮಾದರಿ ವೇತನ ನೀಡದೆ ಕೇಂದ್ರದ ನಿಯಮವನ್ನು ಮಾತ್ರ ಅಳವಡಿಸಿಕೊಳ್ಳುವುದು ಸರಿಯೇ ಎಂದು ಪ್ರತಿಭಟನಾ ನಿರತ ನೌಕರರು ಪ್ರಶ್ನಿಸಿದರು.

ಧರಣಿ ನಂತರ ಮುಖ್ಯ ಕಾರ್ಯದರ್ಶಿಯನ್ನು ನೌಕರರ ನಿಯೋಗ ಭೇಟಿ ಮಾಡಿ ಮನವಿ ಅರ್ಪಿಸಿತು. ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಎನ್. ಕೃಷ್ಣಮೂರ್ತಿ, ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಶಾಂತರಾಮ ಮತ್ತಿತರರು ನಿಯೋಗದಲ್ಲಿದ್ದರು.